ವರ್ಷದಲ್ಲಿ ಒಂದು ಸ್ಪೆಷಲ್ ಇಂಡಸ್ಟ್ರೀಯಲ್ ಎಕ್ಸಿಬಿಷನ್ ಮಾಡಬೇಕೆಂದು ನಾವು ನಿರ್ಣಯವನ್ನು ಮಾಡಿದ್ದೇವೆ.

ಅಧ್ಯಕ್ಷರು:- ಈಗ ಮಾನ್ಯ ಭಾರಿ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಬಹಳ ಜರೂರಾಗಿ ಹೋಗಬೇಕಾಗಿದೆಯೆಂದು ನನಗೆ ಹೇಳಿದ್ದಾರೆ. ಅದು ನನಗೆ ಮನದಟ್ಟಾಗಿದೆ. ಅವರಿಗೆ ಸಂಬಂಧಪಟ್ಟಂತೆ ಇನ್ನೂ ಎರಡು ಪ್ರಶ್ನೆಗಳು ಇವೆ. ಅವುಗಳನ್ನು ಮುಗಿಸಿ ಮತ್ತೆ ಮಿಕ್ಕ ಬೇರೆ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

ಬಾಗಲಕೋಟೆ ಪಟ್ಟಣದಲ್ಲಿ ಆಹಾರ ಸಂಸ್ಕರಣ ಪಾರ್ಕ್‌ನ್ನು ಸ್ಥಾಪಿಸುವುದು

43(505) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ ವರ್ಷ ಬಜೆಟ್ಟ್‌ನಲ್ಲಿ ಹೇಳಿದಂತೆ ಬಾಗಲಕೋಟೆ ಪಟ್ಟಣದ ಹತ್ತಿರ ಆಹಾರ ಸಂಸ್ಕರಣ ಪಾರ್ಕ್‌ನ್ನು ಸ್ಥಾಪಿಸಲು ಯೋಜಿಸಿದ್ದು ನಿಜವೇ;

ಆ. ಹಾಗಿದ್ದಲ್ಲಿ, ಈ ಕುರಿತಂತೆ ಕೈಕೊಂಡಿರುವ ಕ್ರಮಗಳೇನು; ಹಾಗೂ ಆಗಿರುವ ಪ್ರಗತಿ ಏನು

ಇ. ಇಲ್ಲಿಯವರೆಗೆ ಇದಕ್ಕಾಗಿ ಯಾವ ಯಾವ ಬಾಬ್ತಿಗಳಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು) ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. - ಹೌದು -

ಆ. ಆಹಾರ ಸಂಸ್ಕರಣ ಪಾರ್ಕ್‌ನ್ನು ಸ್ಥಾಪಿಸಲು ಈಗಾಗಲೇ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ 273 ಎಕರೆ ಜಮೀನನ್ನು ಪಡೆದುಕೊಳ್ಳಲಾಗಿದೆ.

ಪ್ರಥಮ ಹಂತವಾಗಿ 100 ಎಕರೆ ಜಮೀನನ್ನು ಅಭಿವೃದ್ಧಿ ಪಡೆಸಲು ಯೋಜಿಸಲಾಗಿದೆ. ಅದರಂತೆ ರಸ್ತೆ, ಚರಂಡಿ ಕಲ್ವರ್ಟ್‌ಗಳ ನಿರ್ಮಾಣಕ್ಕೆ ಮತ್ತು ಆರ್.ಸಿ.ಸಿ ಸಂಪ್ ನೀರು ಸಂಗ್ರಹಣಾ ಟ್ಯಾಂಕ್ - ಪಂಪ್‌ಹೌಸ್‌ಗಳ ನಿರ್ಮಾಣ ಮತ್ತು ನೀರು ಸರಬರಾಜುಗಳನ್ನು ಹಾಕಲು ಈ ಕೆಲಸವನ್ನು ಈಗಾಗಲೇ ಗುತ್ತಿಗೆದಾರರಿಗೆ ವಹಿಸಲಾಗಿದೆ.ರಸ್ತೆ ಹಾಗೂ ಚರಂಡಿ ಕೆಲಸಗಳು ಮುಗಿಯುವ ಹಂತದಲ್ಲಿವೆ. ಓವರ್ ಹೆಡ್ ಟ್ಯಾಂಕ್ ಪಂಪ್ ವಸತಿಗೃಹ ಮತ್ತು ಪೈಪ್‌ಲೈನ್ ಕೆಲಸಗಳು ಪ್ರಗತಿಯಲ್ಲಿವೆ.

ಇ. 1. ಜಮೀನಿನ ಬೆಲೆ ರೂ. 240.00 ಲಕ್ಷಗಳು

2. ಸರ್ವೆ ಮತ್ತು ಡಿಮಾರ್ಕೆಷನ್ ರೂ. 1.75 ಲಕ್ಷಗಳು

3. ಲೇಔಟ್ ಮತ್ತು ರೂ. 6.50 ಲಕ್ಷಗಳು ಡೈರಕ್ಷನ್, ಬೋರ್ಡ್

4. ರಸ್ತೆ, ಚರಂಡಿ, ಮೋರಿ ಮತ್ತು ಸೇತುವೆಗಳು 90.00 ಲಕ್ಷಗಳು

5. ನೀರು ಸರಬರಾಜು 15.00 ಲಕ್ಷಗಳು ಸಂಕೀರ್ಣ ನಿರ್ಮಾಣ (ಜಲಸಂಗ್ರಹಕ, ಪಂಪ್ ಹೌಸ್, ವಸತಿಗೃಹ)

ಒಟ್ಟು ರೂ. 353.25 ಲಕ್ಷಗಳು

ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಬಜೆಟ್ ಭಾಷಣದಲ್ಲಿ ಸಾನ್ಯಾನ್ಯ ಮುಖ್ಯಮಂತ್ರಿಗಳು ಬಾಗಲಕೋಟೆ ಜಿಲ್ಲೆಯಲ್ಲಿ ಒಂದು ಆಹಾರ ಸಂಸ್ಕರಣ ಪಾರ್ಕ್‌ನ್ನು ನಿರ್ಮಾಣ ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಆ ದಿಸೆಯಲ್ಲಿ ಈಗಾಗಲೇ ಕೆಲಸಗಳನ್ನು ಪ್ರಾರಂಭ ಮಾಡಿದ್ದು ಒಂದು ವರದಿಯನ್ನು ಕೂಡ ಒದಗಿಸಲಾಗಿದೆ. ಕಳೆದ 53 ವರ್ಷಗಳಲ್ಲಿ ವಿಶೇಷವಾಗಿ ನಮ್ಮ ಭಾಗದಲ್ಲಿ ಕೈಗಾರಿಕೆಗಳ ಸ್ಥಾಪನಾ ವ್ಯವಸ್ಥೆಯಲ್ಲಿ ತೀರ ಹಿಂದುಳಿದಂಥ ಪ್ರದೇಶವಾಗಿದೆ. ಹಿಂದುಳಿದಂಥ ಪ್ರದೇಶಗಳಲ್ಲಿಯೇ ಕೈಗಾರಿಕೆಗಳ ದೃಷ್ಟಿಯಿಂದಂತೂ ಬಾಗಲಕೋಟೆ, ಬಿಜಾಪುರ ಮತ್ತಷ್ಟು ಹಿಂದುಳಿದಂಥವುಗಳಾಗಿವೆ. ಶೇಕಡ 1 ರಷ್ಟು ಕೈಗಾರಿಕೆಗಳು ಕೂಡ ಅಲ್ಲಿ ಇಲ್ಲ. ಈ ದೃಷ್ಟಿಯಿಂದ ಅಲ್ಲಿ ಇನ್ ಫ್ರಾಸ್ಟ್ರಕ್ಚರ್ ಡೆವೆಲಪ್ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕು. ಮಾನ್ಯ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಆ ಪ್ರದೇಶದಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿ ಕೊಂಡರೆ ಮಾತ್ರ ಕೈಗಾರಿಕೆಗಳಿಗೆ ವಿಶೇಷವಾದ ಪ್ರೋತ್ಸಾಹ ಸಿಗುತ್ತದೆ. ಅದು ಆಗದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಭರವಸೆ ಕೇವಲ ಸೈಟ್ ಮಾಡುವಂಥದ್ದು, ಇಂಡಸ್ಟ್ರಿಯಲಿಸ್ಟ್ ಬರುವುದಕ್ಕೆ ಇನ್‌ವೈಟ್ ಮಾಡುವಂಥದ್ದು ಮಾತ್ರ ಆಗುತ್ತದೆ ಅಷ್ಟೆ. ಇಷ್ಟು ಕೆಲಸ ಮಾತ್ರ ಪೂರ್ಣವಾಗುತ್ತದಷ್ಟೆ. ಈಗಾಗಲೇ ಮೈಸೂರಿನ ಬಗ್ಗೆ ಮಾನ್ಯ ಶಂಕರಲಿಂಗೇಗೌಡರು, ಮಾನ್ಯ ರಾಮಾದಾಸ್‌ರವರು ಏನು ಹೇಳಿದರೋ ಆ ರೀತಿ ಕೇವಲ ಸೈಟ್ ಮಾಡಿಕೊಡುವಂಥ ಸ್ಥಿತಿ ಆ ಭಾಗದಲ್ಲಿ ಬರಬಾರದು ಎನ್ನುವಂಥ ವಿಚಾರವನ್ನು ತಮ್ಮಲ್ಲಿ ಅರಿಕೆ ಮಾಡಿಕೊಂಡು ಕೇಳುತ್ತಿದೇನೆ. ಇನ್ ಫ್ರಾಸ್ಟ್ರಕ್ಚರ್ ಅಭಿವೃದ್ಧಿ ದಿಸೆಯಲ್ಲಿ ಗದಗ್-ಬಿಜಾಪುರ ಬ್ರಾಡ್‌ಗೇಜ್ ಕೆಲಸ ಇನ್ನೂ ಪೂರ್ಣ ಆಗದೇ ಉಳಿದಿದೆ. ಅದರ ಬಗ್ಗೆ ತಾವು ತಮ್ಮ ಇಲಾಖಾ ವತಿಯಿಂದ ವಿಶೇಷವಾದ ಪ್ರಯತ್ನವನ್ನು ಮಾಡಬೇಕು. ಈಗಾಗಲೇ ಕೇವಲ 20 ಕೋಟಿ ರೂಪಾಯಿಗಳು ಮಾತ್ರ ಗದಗ್-ಬಿಜಾಪುರ್ ಬ್ರಾಡ್‌ಗೇಜ್‌ಗೆ ಖರ್ಚು ಮಾಡಲಾಗಿದ್ದು ಅಲ್ಲಿ ಇನ್ನುಳಿದಂಥ ಯಾವುದೇ ಕಾರ್ಯಕ್ರಮ ಸರ್ಕಾರದಿಂದ ಆಗಿಲ್ಲ. ಅದರ ಬಗ್ಗೆ ಕೂಡ ಸರ್ಕಾರದ ವತಿಯಿಂದ ಸೃಷ್ಟೀಕರಣವಾಗಬೇಕು. ಇದರ ಜೊತೆಗೆ ರಸ್ತೆಗಳ ಅಭಿವೃದ್ಧಿ ಕೂಡ ಆಗಬೇಕಾಗಿದೆ. ಒಟ್ಟಿನಲ್ಲಿ ಈಗ ಇನ್‌ಫ್ರಾಸ್ಟ್ರಕ್ಚರ್ ಕೊರತೆ ಇದ್ದ ಕಾರಣಕ್ಕಾಗಿ ಅಲ್ಲಿ ಇಂಡಸ್ಟ್ರೀಗಳು ಡೆವಲಪ್ ಆಗುತ್ತಿಲ್ಲ. ದಿಸೆಯಲ್ಲಿ ತಾವೇನು ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಿ? ಹಾಗೂ ತಾವೇನು ಇಂಡಸ್ಟ್ರಿಯಲ್ ಪಾರ್ಕ್ ಬಗ್ಗೆ ಹೇಳಿದ್ದಿರೋ ಅದನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ:- ಕೇಂದ್ರ ಸರ್ಕಾರದ ಸಹಕಾರದಿಂದ ರಾಜ್ಯದಲ್ಲಿ ಬಾಗಲಕೋಟೆ ಮಾಲೂರು, ಬೆಳಗಾವಿ, ಚಿತ್ರದುರ್ಗ, ಮದ್ದೂರು ಮತ್ತು ಜೀವರ್ಗಿಗಳಲ್ಲಿ ಫುಡ್ ಪ್ರೋಸೆಸಿಂಗ್ ಪಾರ್ಕ್ ಡೆವೆಲಪ್ ಮಾಡಬೇಕೆಂದು ನಾವು ನಿರ್ಣಯವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರ ಈಗಾಗಲೇ ಬಾಗಲಕೋಟೆ, ಮಾಲೂರು ಮತ್ತು ಜೇವರ್ಗಿಗಳಿಗೆ ಸಂಬಂಧಪಟ್ಟಂತೆ ತನ್ನ ಮಾನ್ಯತೆಯನ್ನು ಕೊಟ್ಟಿದೆ. ಬೇರೆ ಪಾರ್ಕ್‌ಗಳಿಗೆ ನಾವು ಮಾನ್ಯತೆಯನ್ನು ತೆಗೆದುಕೊಳ್ಳಬೇಕಾಗಿದೆ.

ಪ್ರತಿಯೊಂದು ಪಾರ್ಕ್‌ಗೆ ಇನ್‌ಫ್ರಾಸ್ಟ್ರಕ್ಚರ್‌ಡೆವೆಲಪ್ ಮಾಡುವುದಕ್ಕೆ ಕೇಂದ್ರ ಸರ್ಕಾರ 4 ಕೋಟಿ ರೂಪಾಯಿಗಳನ್ನು ಕೊಡುತ್ತದೆ ಮತ್ತು ನಾವು ಕೂಡ 4 ಕೋಟಿ ರೂಪಾಯಿಗಳನ್ನು ಕಾಂಟ್ರಿಬ್ಯೂಟ್ ಮಾಡುತ್ತೇವೆ. ಬಾಗಲಕೋಟೆ ವಿಚಾರದಲ್ಲಿ ಹೇಳಬೇಕೆಂದರೆ 273 ಎಕರೆಗಳಷ್ಟು ಜಮೀನು ಇದೆ. ಇದನ್ನು ಬಾಗಲಕೋಟೆ ಸಿಟಿ ಡೆವೆಲಪ್‌ಮೆಂಟ್ ಅಥಾರಿಟಿಯವರಿಂದ ತೆಗೆದುಕೊಂಡು ಈಗಾಗಲೇ ಅಲ್ಲಿ ಡ್ರೈನೇಜ್, ರೋಜ್ ವ್ಯವಸ್ಥೆ ಬಗ್ಗೆ ಕೆಲಸಗಳು ಪ್ರಾರಂಭವಾಗಿವೆ. ಈಗಾಗಲೇ 353 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮುಖ್ಯವಾಗಿ ಕೆ.ಐ.ಎ.ಡಿ.ಬಿ ಮುಖಾಂತರ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್‌ನ್ನು ಬಿಲ್ಡ್-ಅಪ್ ಮಾಡುತ್ತಿದ್ದೇವೆ. ರಸ್ತೆ, ಒಳಚರಂಡಿ ವ್ಯವಸ್ಥೆ ನೀರು ಮತ್ತು ವಿದ್ಯುಚ್ಛಕ್ತಿ ಸೌಲಭ್ಯಗಳು ಆದನಂತರ ಇನ್ನು ಸ್ಪೆಷಲೈಸ್ಡ್ ಮೂಲಭೂತ ಸೌಕರ್ಯಗಳು ಡೆವೆಲಪ್ ಆಗಬೇಕು. ಉದಾಹರಣೆಗೆ ಹೇಳಬೇಕೆಂದರೆ , ಕ್ವಾಲಿಟಿ ಕಂಟ್ರೋಲ್ ಲ್ಯಾಬೊರೇಟರಿ, ಕೋಲ್ಡ್-ಸ್ಟೋರೇಜ್ ಫೆಸಿಲಿಟೀಸ್, ಟೆಕ್ನಿಕಲ್ ಅಂಡ್ ಅದರ್ ಸರ್ವಿಸಸ್ ಮಾಡಬೇಕು. ಅದಕ್ಕೆ ನಾವು ಟೆಂಡರ್ ಕರೆದು ಪ್ರೈವೇಟ್ ಸ್ಪೆಷಲೈಸ್ಡ್ ಸೆಕ್ಟರ್ ಮುಖಾಂತರ ಮಾಡುತ್ತೇವೆ. ಹಾಗಾಗಿ ಒಂದು ಹೊಸ ಫುಡ್ ಪ್ರೋಸೆಸಿಂಗ್ ಪಾಲಿಸಿಯನ್ನು ಆದಷ್ಟು ಬೇಗ ನಾವು ಜಾರಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:- ಫುಡ್ ಪ್ರೋಸೆಸಿಂಗ್ ಹೊಸದೇನಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಅದನ್ನು ಅಮೆಂಡೆಡ್ ಪಾಲಿಸಿ ಎಂದು ಹೇಳೋಣ. ಈಗ ರೈತರೂ ಕೂಡ ಏನು ತಮ್ಮ ಹೊಲಗಳಲ್ಲಿ ಬೆಳೆಯುತ್ತಾರೆ. ಉದಾಹರಣೆಗೆ ಬಾಗಲಕೋಟೆಯಲ್ಲಿ ರೈತರು ದ್ರಾಕ್ಷಿ ನಿಂಬೆಹಣ್ಣು ದಾಳಿಂಬೆ ಹಣ್ಣುಗಳನ್ನು ಬೆಳೆಯುತ್ತಾರೆ. ಆದರೆ ಅದಕ್ಕೆ ಈಗ ವ್ಯಾಲ್ಯು ಅಡಿಶನ್ ಆಗುತ್ತಿಲ್ಲ. ಆ ಕಾರಣದಿಂದ ಫುಡ್ ಪ್ರೋಸೆಸಿಂಗ್ ಪಾರ್ಕ್ ಮಾಡುತ್ತಿದ್ದೇವೆ. ಅದಕ್ಕಾಗಿ ಒಂದು ನೀತಿ ವಿಚಾರ ಕ್ಯಾಬಿನೆಟ್ ಮುಂದೆ ಇದೆ. ನಾನು ಎ.ಪಿ.ಎಂ.ಸಿ. ಸಚಿವರ ಜೊತೆ ಮಾತನಾಡಿ ತದನಂತರ ಆ ನೀತಿಯನ್ನು ಜಾರಿಗೆ ತರಬೇಕಾಗಿದೆ. ಅದು ಆದಷ್ಟು ಬೇಗನೆ ಜಾರಿಗೆ ಬರುತ್ತದೆ. ಇದರ ಜೊತೆಗೆ ಫುಡ್ ಕರ್ನಾಟಕ ಲಿಮಿಟೆಡ್ ಅಂಡರ್ ಗೌವರ್ನಮೆಂಟ್ ಮಿನಿಮಮ್ ಶೇರ್ ಕ್ಯಾಪಿಟಲ್ ಜೊತೆಗೆ ಐ.ಸಿ.ಐ.ಸಿ.ಐ, ಐ.ಡಿ.ಬಿ.ಐ. ನವರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿಕೊಂಡು ಒಂದು ಕಂಪನಿಯನ್ನು ಸ್ಥಾಪನೆ ಮಾಡಬೇಕೆಂದು ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಹಾಗಾಗಿ ಬಾಗಲಕೋಟೆಲ್ಲಿ ಒಂದು ಒಳ್ಳೆಯ ಆಧುನಿಕ ಪಾರ್ಕ್ ಆದಷ್ಟು ಬೇಗನೆ ನಿರ್ಮಾಣ ಆಗುತ್ತದೆ. ಎನ್ನುವ ಭರವಸೆಯನ್ನು ನಾನು ಕೊಡುತ್ತಿದ್ದೇನೆ. ಆದರೆ ಕೈಗಾರಿಕೆಗಳು ಪ್ರಾರಂಭವಾಗಬೇಕಾದರೆ ಆ ಭಾಗದ ಜನರು ಮುಂದೆ ಬರಬೇಕು. ನಾವು ಬಂದು ಆ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಬರುವುದಿಲ್ಲ. ಆ ಭಾಗದ ಜನಗಳು ಮುಂದೆ ಬಂದರೆ ಖಂಡಿತವಾಗಿ ಅಲ್ಲಿ ಕೈಗಾರಿಕೆಗಳು ಬರುತ್ತವೆ.

ಶ್ರೀ ಪಿ.ಹೆಚ್. ಪೂಜಾರ್:- ನೀವು ಹೇಳಿದ್ದು ಸ್ವಾಗತಾರ್ಹವಾದ ವಿಚಾರ. ಆದರೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಫಾಸ್ಟ್ ಆಗಿ ಆಗುತ್ತಿಲ್ಲವೆಂದು ನಾನು ಹೇಳಿದ್ದು. ಅದನ್ನು ಬೇಗ ಮಾಡಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಈ ಬಗ್ಗೆ ನಾನು ಈಗಾಗಲೇ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅವರು ಸೋಲಾಪುರ್ - ಗದಗ್ ರೈಲೇ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಬಗ್ಗೆ

ನಾವು ಈಗಾಗಲೇ ಸಾಕ್ಷ್ಯ ಒತ್ತಡವನ್ನು ಕೇಂದ್ರ ಸರ್ಕಾರಕ್ಕೆ ತರುತ್ತಿದ್ದೇವೆ. ಇದು ಇಂಪಾರ್ಟೆಂಟ್ ಬ್ರಾಡ್‌ಗೇಜ್ ಲೈನ್ ಆಗಬೇಕು ಎಂದು ಹೇಳಿ ಅದರ ಬಗ್ಗೆ ಇನ್ನೂ ಹೆಚ್ಚಿನ ಒತ್ತಡವನ್ನು ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲಿ ಮಾಡುತ್ತದೆ. ತಾವೂ ಸಹ ತಮ್ಮ ಪ್ರಭಾವವನ್ನು ಬಳಸಿ ಅದನ್ನು ಮಂಜೂರ್ ಮಾಡಿಸಬೇಕು ಎಂದು ತಮಗೂ ನಾನು ವಿನಂತಿ ಮಾಡುತ್ತಿದ್ದೇನೆ.

ರಾಜ್ಯದಲ್ಲಿ ನೂತನ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವುದು

45(499) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನೂತನ ಕೈಗಾರಿಕೆಗಳಿಗೆ ಅನುಮತಿ ಕೋರಿ ಬಂದಿರುವ ಅರ್ಜಿಗಳೆಷ್ಟು;

ಆ. ಕಳೆದ ಮೂರು ವರ್ಷಗಳಿಂದ ಈ ರೀತಿಯ ಎಷ್ಟು ಕೈಗಾರಿಕೆಗಳಿಗೆ ಅನುಮತಿ ನೀಡಲಾಗಿದೆ;

ಇ. ಈ ವರ್ಷ ಎಷ್ಟು ಕೈಗಾರಿಕೆಗಳಿಗೆ ಅನುಮತಿ ನೀಡಲು ಸರ್ಕಾರ ನಿರ್ಧರಿಸಿದೆ. ಅವು ಯಾವುವು;

ಈ. ಕೈಗಾರಿಕೆಗಳಿಗೆ ಅನುಮತಿ ನೀಡಲು ಅನುಸರಿಸುವ ಮಾನದಂಡಗಳೇನು.

ಉ. ಇಂತಹ ಕೈಗಾರಿಕೆಗಳಿಗೆ ಸರ್ಕಾರ ಸಹಾಯಧನ ಸಬ್ಸಿಡಿ ಹಣ ನೀಡುವುದೇ, ಹಾಗಿದ್ದಲ್ಲಿ ಎಷ್ಟು

ಊ. ಇದುವರೆವಿಗೂ ಎಷ್ಟು ಕೈಗಾರಿಗಳಿಗೆ ಸಹಾಯ ಧನ ಮಂಜೂರು ಮಾಡಲಾಗಿದೆ. ಕೊಡಗು ಜಿಲ್ಲೆಯನ್ನೊಳಗೊಂಡಂತೆ ವಿವರಗಳನ್ನು ಒದಗಿಸುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು)

ಅ. ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯು 487 ಅರ್ಜಿಗಳನ್ನು ಅನುಮೋದನೆಗಾಗಿ ಸ್ವೀಕರಿಸಿರುತ್ತದೆ ಹಾಗೂ ಉನ್ನತಮಟ್ಟದ ಸಮಿತಿಯು 124 ಅರ್ಜಿಗಳನ್ನು ಅನುಮೋದನೆಗಾಗಿ ಸ್ವೀಕರಿಸಿರುತ್ತದೆ.

ಆ. ಕಳೆದ ಮೂರು ವರ್ಷಗಳಿಂದ ಅಂದರೆ 1.4.99 ರಿಂದ 31.3.02ರ ಅವಧಿಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಮುಖೇನ ಒಟ್ಟು 487 ಕೈಗಾರಿಕಾ ಯೋಜನೆಗಳಿಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಕಡಿಮೆ ಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 8638.46 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 2,09,500 ಜನರಿಗೆ ಉದ್ಯೋಗಾವಕಾಶ ಲಭಿಸಲಿದೆ. ಹಾಗೂ ಉನ್ನತಮಟ್ಟದ ಸಮಿತಿಯಲ್ಲಿ ಒಟ್ಟು 124 ಕೈಗಾರಿಕಾ ಯೋನೆಗಳಿಗೆ (ಪ್ರತಿ ಯೋಜನೆ ರೂ. 50.00 ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ) ಮಂಜೂರಾತಿ ನೀಡಲಾಗಿದೆ. ಈ ಯೋಜನೆಗಳಲ್ಲಿ ಒಟ್ಟು ರೂ. 55,375.61 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು ಸುಮಾರು 1,49,153 ಜನರಿಗೆ ಉದ್ಯೋಗಾವಕಾಶ ಲಭಿಸಿದೆ.